ವಸ್ತುಗಳನ್ನು ತಲುಪಿಸಿದಾಗ, ಅವರೊಡನೆ ನೇರವಾಗಿ ಸಂಪರ್ಕ ಏರ್ಪಡುತ್ತಿತ್ತು. ತಾವು ತಯಾರಿಸಿದ ವಸ್ತುಗಳ ಬಗ್ಗೆ ಅವರ ಅಭಿಪ್ರಾಯ, ಮೊದಲ ಉದ್ಗಾರ ಎಲ್ಲವೂ ಉದ್ಯಮರಂಗದ ಪಾಠಗಳಾಗಿದ್ದವು. ಒಂದು ಉದ್ಯಮದ ಯಶಸ್ಸಿಗೆ ಗ್ರಾಹಕರೊಡನೆ ನಿಕಟ ಸಂಪರ್ಕ ಎಷ್ಟು ಮುಖ್ಯ ಎಂಬ ಅರಿವು ಆ ಸಣ್ಣ ವಯಸ್ಸಿನ ಅನುಭವದಲ್ಲಿ ವೇದ್ಯವಾಗಿತ್ತು.

ಜಸನೀಜೀ ಅವರ ಬಳಿ ಒಂದು ಇಟ್ಟಿಗೆಯ ಭಟ್ಟಿ ಕೂಡಾ ಇತ್ತು. ಅಲ್ಲಿಗೂ ಭಾವೇಶ್ ಅನೇಕ ಬಾರಿ ಹೋಗುತ್ತಿದ್ದನು. ಮಣ್ಣಿನಿಂದ ಇಟ್ಟಿಗೆಗಳನ್ನು ಹೇಗೆ ಮಾಡುತ್ತಾರೆ ಎಂಬುದು ಆತನಿಗೆ ಅಚ್ಚರಿಯ ವಿಷಯ. ಇಟ್ಟಿಗೆಯಿಂದ ಮನೆಗಳು ಕಟ್ಟಡಗಳು ಎದ್ದು ನಿಲ್ಲುತ್ತವೆ. ಇಟ್ಟಿಗೆಯ ಭಟ್ಟಿಯಲ್ಲಿ ಎಲ್ಲವನ್ನೂ ಮುಟ್ಟಿ ಮುಟ್ಟಿ ಸ್ಪರ್ಶದಿಂದ ತಿಳಿಯಲು ಪ್ರಯತ್ನಿಸುತ್ತಿದ್ದನು. ನೂರು ಪ್ರಶ್ನೆಗಳನ್ನು ಕೇಳುವನು. ಎಲ್ಲದರಲ್ಲೂ ಭಾವೇಶ್‌ಗೆ ಅಗಾಧ ಕುತೂಹಲ. ಅನೇಕ ಬಾರಿ ಮಳೆ ಸುರಿದು ಮಣ್ಣು ಕೆಟ್ಟುಹೋಗುತ್ತಿತ್ತು. ಸ್ಪರ್ಶದಿಂದಲೇ ವ್ಯತ್ಯಾಸ ತಿಳಿಯುವುದು. ಈಗೇನು ಮಾಡುತ್ತಾರೆ? ಕೇಳುತ್ತಿದ್ದನು. ಆ ಮಣ್ಣಿನ ಮರುಬಳಕೆ ಹೇಗೆ ನಡೆಯುತ್ತದೆ ಎಂದು ಅರಿಯುತ್ತಿದ್ದನು. ಭಾವೇಶನ ಅನುಭವದ ವಲಯ ಹಿಗ್ಗುತ್ತಾ ಹೋಗಿತ್ತು. ಪ್ರತಿಯೊಂದನ್ನೂ ತನ್ನ ಇಂದ್ರಿಯಗಳ ಮೂಲಕ ಅರಿಯುವ ಆತನ ಪ್ರಯತ್ನ ಕಣ್ಣಿಲ್ಲದೆಯೂ ಸುತ್ತಲಿನ ಜಗತ್ತಿನ ವಿಸ್ತಾರದ ಪರಿಚಯ ಮಾಡಿಕೊಳ್ಳಲು ಸಹಾಯಕವಾಗಿತ್ತು.

ಭಾವೇಶ್ ಸುಮ್ಮನೆ ಕುಳಿತವನೇ ಅಲ್ಲ. ಸದಾ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತಿದ್ದನು. ತಾಯಿಯ ಪ್ರೋತ್ಸಾಹ ಮತ್ತು ಸಕಾರಾತ್ಮಕ ವಿಚಾರಗಳು ಭಾವೇಶ್‌ಗೆ ವರದಾನವಾಗಿತ್ತು. ಆಕೆ ಭಾವೇಶ್‌ಗೆ ತಾನು ದೃಷ್ಟಿಹೀನ ಎಂಬುದು ಮನಸ್ಸಿಗೇ ಬಾರದಂತೆ, ಓರ್ವ ಸಾಧಾರಣ ಹುಡುಗ ಏನೆಲ್ಲ ಮಾಡಬಲ್ಲನೋ ಅವೆಲ್ಲವನ್ನೂ ಮಾಡುವಂತೆ ಪ್ರೇರೇಪಿಸುತ್ತಿದ್ದಳು.

ಭಾವೇಶ್ ಬೆಳೆದಂತೆ, ತಾಯಿಯೇ ಪ್ರತಿ ಎರಡು ಮೂರು ದಿನಕ್ಕೆ ಭಾವೇಶನ ಶಾಲೆಗೆ ಬರುತ್ತಿದ್ದಳು. ಶಿಕ್ಷಕರಿಂದ ಮಗನ ಓದಿನ ಬಗ್ಗೆ ತಿಳಿದುಕೊಳ್ಳುತ್ತಿದ್ದಳು. ಇಷ್ಟು ವರ್ಷಗಳಲ್ಲಿ ಭಾವೇಶ್ ಅನೇಕ ಸಹಪಾಠಿಗಳ ಸ್ನೇಹ ಸಂಪಾದಿಸಿದ್ದನು. ಭಾವೇಶನ ನೋಟ್ಸ್ ತಯಾರಿಗೆ ಬಹಳಷ್ಟು ಮಕ್ಕಳು ಸಹಾಯ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಭಾವೇಶ್ ಸಹಪಾಠಿಗಳಿಗೆ ಮನೆಯಿಂದ ಚಿತ್ರಕತೆಯ ಪುಸ್ತಕಗಳನ್ನು ಕೊಂಡೊಯ್ದು ಕೊಡುವನು. ಮೆಲ್ಲನೆ ಭಾವೇಶ್‌ಗೆ ತನ್ನ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ಮೂಡಿತ್ತು. ಶಾಲೆಯಲ್ಲಿಯೂ ಜನಪ್ರಿಯ ವಿದ್ಯಾರ್ಥಿಯಾಗತೊಡಗಿದ್ದ. ಆರನೇ ತರಗತಿಯಲ್ಲಿದ್ದಾಗ, ಭಾವೇಶನನ್ನು ಒಮ್ಮೆ ಕ್ಲಾಸ್ ಮಾನಿಟರ್ ಕೂಡಾ ಮಾಡಲಾಗಿತ್ತು! ಇಷ್ಟರಮಟ್ಟಿಗೆ ಶಾಲೆ ಅಂಧ ಹುಡುಗನನ್ನು ಸ್ವೀಕರಿಸಲು ಭಾವೇಶ್ ಪ್ರೇರಣೆಯಾಗಿದ್ದ. ಭಾವೇಶ್ ಪ್ರತಿಯೊಬ್ಬ ಹುಡುಗ ಯಾವ ಸಾಲಿನಲ್ಲಿ ಕುಳಿತ್ತಿದ್ದಾನೆ ಎಂದು ನೆನಪಿನಲ್ಲಿ ಇಟ್ಟುಕೊಂಡು, ಅವರ ಹೆಸರು ಕರೆದು, ಪುಸ್ತಕದಿಂದ ಓದಲು ಹೇಳುವನು. ಕೆಲವೊಮ್ಮೆ ತರಗತಿಯಲ್ಲಿ ಇಲ್ಲದ ಹುಡುಗನ ಹೆಸರು ಕರೆದಾಗ, ಎಲ್ಲರೂ ಗೊಳ್ಳನೆ ನಗುವರು. ಭಾವೇಶ್ ಇದನ್ನೇನೂ ಅವಮಾನವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ತಾನೂ ನಕ್ಕು ಮುಂದಿನ ಹೆಸರು ಕೂಗುವನು. ನಾನು ನಕ್ಕರೆ ಜಗತ್ತು ನನ್ನೊಡನೆ ನಗುವುದು, ನಾನು ಅತ್ತರೆ ನಾನೊಬ್ಬನೇ ಕುಳಿತು ಅಳಬೇಕಾಗುವುದು ಎನ್ನುವುದು ಎಳೆಯ ವಯಸ್ಸಿಗೇ ಭಾವೇಶ್‌ಗೆ ಅನುಭವಕ್ಕೆ ಬಂದಿತ್ತು.

* * *

ಅಪ್ಪ ಅಮ್ಮ ಇಬ್ಬರೂ ಎತ್ತರದ ವ್ಯಕ್ತಿಗಳು. ಹಾಗೆಂದೇ ಭಾವೇಶ್ ಬಾಲ್ಯದಲ್ಲಿಯೇ ಅಗತ್ಯಕ್ಕಿಂತಲೂ ಹೆಚ್ಚು ಎತ್ತರಕ್ಕೆ ಬೆಳೆದಿದ್ದನು. ಕಣ್ಣು ಸರಿಯಾಗಿ ಕಾಣದಿದ್ದರೂ ಭಾವೇಶ್ ದೈಹಿಕವಾಗಿ ಆರೋಗ್ಯವಂತನಿದ್ದನು. ಭಾವೇಶ್‌ಗೆ ಆಟದಲ್ಲಿ ಎಲ್ಲಿಲ್ಲದ ಉತ್ಸಾಹ. ಆದರೆ ಆತನ ಕಣ್ಣಿನ ಕಾರಣದಿಂದಾಗಿ ಶಾಲೆಯಲ್ಲಿನ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು ಕಷ್ಟವಿತ್ತು.

ಮನೆಯಿಂದ ಹೆಚ್ಚೇನೂ ದೂರವಿರಲಿಲ್ಲ, ದಿಗಂತದವರೆಗೆ ಹರಡಿ ನಿಂತ ಹಸಿರು ಹೊಲಗದ್ದೆಗಳು. ಅಲ್ಲಿ ದುಡಿವ ರೈತರ ಮಕ್ಕಳೂ ಈತನ ಸ್ನೇಹಿತರು. ತೊಗರಿ ಗಿಡಗಳು, ಕಡಲೆ, ಗೋಧಿ ಇವುಗಳ ನಡುವೆ ಭಾವೇಶನನ್ನು ಆ ಮಕ್ಕಳು ದೂರ ದೂರಕ್ಕೆ ಕೈ ಹಿಡಿದು ಕರೆದೊಯ್ಯುವರು. ಶಾಲೆಯ ಸ್ನೇಹಿತ ದಿನೇಶ ಮತ್ತೆ ಒಂದಿಬ್ಬರು ಗೆಳೆಯರು ಸೈಕಲ್‌ನಲ್ಲಿ ಕೂಡಾ ಹೋಗುತ್ತಿದ್ದರು. ಆ ಹೊಲಗದ್ದೆಗಳ ನಡುವೆ ಬೇವು, ಮಾವು, ಹುಣಿಸೆಯ ದೊಡ್ಡ ದೊಡ್ಡ ಮರಗಳಿದ್ದವು. ಸ್ಪರ್ಶದಿಂದಲೇ ಅವನ್ನು ಅಪ್ಪಿ ಅವುಗಳ ಮೇಲೆ ಏರಲು ಭಾವೇಶ್‌ಗೆ ಬಹಳ ಖುಷಿ. ಜೊತೆಯ ಹುಡುಗರೂ ಸಹಾಯ ಮಾಡುವರು. ಆ ದಿನಗಳಲ್ಲಿ ಅವರೆಲ್ಲರಿಗೆ ಪ್ರಿಯವಾದ ಒಂದು ಆಟವಿತ್ತು. ಮರದ ಕೆಳಗೆ ಎರಡು ಅಡಿ ವ್ಯಾಸದ ಒಂದು ಗುಂಡಾದ ಗೆರೆ ಎಳೆದು ಲಕ್ಷ್ಯವನ್ನು ತಯಾರಿಸುವರು. ಹಾಗೆಯೇ ನೇರವಿರುವ ಒಂದು, ಒಂದೂವರೆ ಅಡಿಯ ರೆಂಬೆಯನ್ನು ಹುಡುಕಿ ಆ ವೃತ್ತಾಕಾರದ ಲಕ್ಷ್ಯದ ಒಳಗೆ ಇಡುತ್ತಿದ್ದರು. ಈಗ ಮೊದಲು ಯಾರು ಓಡಬೇಕು ನಿರ್ಧಾರವಾಗುತ್ತಿತ್ತು. ನಂತರ ಇತರ ಹುಡುಗರು ಆ ರೆಂಬೆಯನ್ನು ಅಷ್ಟು ದೂರಕ್ಕೆ ಎಸೆಯುವರು. ಸೋತ ಹುಡುಗನೊಬ್ಬ ಅದನ್ನು ತೆಗೆದುಕೊಂಡು ಬರಲು ಓಡುವ. ಅವನು ಬರುವಷ್ಟರಲ್ಲಿ ಉಳಿದ ಹುಡುಗರೆಲ್ಲರೂ ಮರ ಹತ್ತಿ ಕುಳಿತುಕೊಳ್ಳಬೇಕು. ಆತ ಕೈಯಲ್ಲಿ ಆ ರೆಂಬೆಯ ಕೋಲನ್ನು ಹಿಡಿದು ಮರದ ಮೇಲೆ ಕುಳಿತ ಇವರನ್ನು ಮುಟ್ಟಲು ಪ್ರಯತ್ನಿಸುವ. ಮಕ್ಕಳು ಆದಷ್ಟು ಮೇಲಕ್ಕೆ ಏರುತ್ತಿದ್ದರು. ಕಾರಣ ರೆಂಬೆಯಿಂದ ಯಾರನ್ನು ಮೊದಲು ಮುಟ್ಟಿದನೋ ಆತ ಸೋತಂತೆ. ಈಗ ಎಸೆದ ರೆಂಬೆಯ ಹಿಂದೆ ಓಡುವ ಕೆಲಸ ಆತನದು. ಭಾವೇಶ್ ಒಮ್ಮೆ ಮರ ಹತ್ತಿದರು ಎಂದರೆ ಬಹಳ ಸಲೀಸಾಗಿ ಕೊಂಬೆಗಳನ್ನು ಅಪ್ಪಿ ಆಸರೆಗೆ ಹಿಡಿದು ಮೇಲೆ ಮೇಲಕ್ಕೆ ಏರಿ ಬಿಡುತ್ತಿದ್ದನು. ಇಂದಿನ ಯಾವ ತಂತ್ರಜ್ಞಾನವಾಗಲೀ, ಶ್ರೀಮಂತಿಕೆಯ ಬಗೆಬಗೆಯ ಆಟಿಗೆಗಳಾಗಲೀ ಇಲ್ಲದೆಯೂ ಪ್ರಕೃತಿಯ ಮಡಿಲಲ್ಲಿ ಸ್ವಚ್ಛಂದವಾಗಿ ಗೆಳೆಯರೊಡನೆ ಮೈ ಮನಸ್ಸುಗಳನ್ನು ತೊಡಗಿಸಿ ಆಡಿದ ಈ ಆಟಗಳು ಅವರೆಲ್ಲರಿಗೂ ಅಗಾಧ ಖುಷಿಯ ಕ್ಷಣಗಳಾಗಿದ್ದವು.

ಬಡತನದ ಕುಟುಂಬದಲ್ಲಿ ಬೆಳೆಯುತ್ತಿದ್ದರೂ, ಒಬ್ಬನೇ ಮಗನಾಗಿ ಬೆಳೆಯುತ್ತಿದ್ದ ಭಾವೇಶ್‌ಗೆ ಎಂದೂ ಊಟ ತಿಂಡಿಗೆ ತೊಂದರೆ ಆಗಿರಲಿಲ್ಲ. ಸಾಕಷ್ಟು ದಷ್ಟಪುಷ್ಟನಾಗಿಯೇ ಬೆಳೆದನು. ಶಾಲೆಗೆ ಎರಡು ತಿಂಗಳು ಬೇಸಿಗೆಯ ರಜೆ ಬಂತು ಎಂದರೆ ಅಮ್ಮನೊಡನೆ ಬಾಂಬೆಯ ಅಜ್ಜಿಯ ಮನೆಗೆ ಬರುವನು. ಅಲ್ಲಿದ್ದಾಗ, ಕಲ್ಯಾಣದ ಬಳಿ ಇದ್ದ ಡಾಂಬಿವಲಿ ಉಪನಗರದ ತಮ್ಮ ಮೌಸಿಯ ಮನೆಗೆ ಹೋಗುವ ತವಕ. ಮೌಸಿಯ ಮಕ್ಕಳೊಡನೆ ಹತ್ತಿರದಲ್ಲಿದ್ದ ಒಂದು ಬಾವಿಗೆ ಆಡಲು ಹೋಗುವನು. ಅದು 30 ಮೀಟರ್ ವ್ಯಾಸದ ಬಾವಿ. ಹುಡುಗ ಹುಡುಗಿಯರೆಲ್ಲ ಧುಮುಕಿ ಆ ಬೇಸಿಗೆಯ ದಿನಗಳಲ್ಲಿ ಈಜಿ ಖುಷಿಪಡುವರು. ಇಲ್ಲಿಯೇ ಹೆದರಿಕೆ ಬಿಟ್ಟು ಮೆಲ್ಲನೆ ಭಾವೇಶ್ ನೀರಿಗಿಳಿದಿದ್ದನು. ಇವರ ಬುವಾ (ತಂದೆಯ ಸೋದರಿ) ಮುಂಬಯಿಯ ಅಂಧೇರಿಯಲ್ಲಿ ವಾಸವಿದ್ದರು. ಅವರ ಮನೆಯ ಬಳಿಯೇ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಹೊಸದಾಗಿ ನಿರ್ಮಾಣವಾಗಿತ್ತು. ಭಾವೇಶನ ಈ ಸೋದರತ್ತೆಯ ಮಗ ಭಾವಿನ್ ಅಲ್ಲಿ ಆಜೀವ ಸದಸ್ಯನಾಗಿದ್ದ ಕಾರಣ, ಆತ ತನ್ನ ಜೊತೆಯಲ್ಲಿ ಮತ್ತೊಬ್ಬ ವ್ಯಕ್ತಿಯನ್ನು ಕರೆದೊಯ್ಯಲು ಅನುಮತಿ ಇತ್ತು. ಆತನೊಡನೆ ಭಾವೇಶ್ ಆ ಒಲಿಂಪಿಕ್ ಮಟ್ಟದ ದೊಡ್ಡ ಈಜುವ ಕೊಳದಲ್ಲಿ ಈಜು ಕಲಿತರು. ಘಾಟ್ಕೊಪ್ಪರ್‌ನಲ್ಲಿ ಅವರ ಅಜ್ಜಿಯ ಮನೆಯ ಬಳಿಯೇ ಓಡಿಯನ್ ಎಂಬ ಸಿನಿಮಾ ಮಂದಿರ ಇದ್ದಿತು. ಅದರ ಪಕ್ಕದಲ್ಲಿಯೇ ಒಂದು ಈಜುವ ಕೊಳ. ಭಾವೇಶನ ಓರ್ವ ದೂರದ ಮಾಮಾ ಅಲ್ಲಿಯ ಕ್ಯಾಂಟೀನ್ ನಡೆಸುತ್ತಿದ್ದರು. ಅಲ್ಲಿಗೂ ಹೋಗಿ ಭಾವೇಶ್ ಈಜುವನು. ಇವೆಲ್ಲ ಭಾವೇಶನ ಹನ್ನೊಂದು–ಹನ್ನೆರಡರ ವಯಸ್ಸಿನಲ್ಲಿ ನಡೆದ ಘಟನೆಗಳು.

ಶಾಲೆ ಬೆಳಗ್ಗೆ ಹತ್ತೂವರೆಗೆ ಆರಂಭವಾಗುತ್ತಿತ್ತು. ಯಾರಾದರೂ ಶಾಲೆಗೆ ತಡವಾಗಿ ಬಂದರೆ, ಇಡೀ ಶಾಲೆಯನ್ನು ಓಡುತ್ತಾ ಒಂದು ಸುತ್ತು ಹಾಕುವ ಶಿಕ್ಷೆ ವಿಧಿಸಲಾಗುತ್ತಿತ್ತು. ಭಾವೇಶ್ ಕೂಡಾ ಕೆಲವು ಬಾರಿ ತಡವಾಗಿ ಶಾಲೆ ತಲುಪಿದ್ದುಂಟು. ಆಗ ತನ್ನಂತೆಯೇ ತಡವಾಗಿ ಬಂದ ಹುಡುಗರಲ್ಲಿ ಒಬ್ಬನ ಕೈ ಹಿಡಿದು ಭಾವೇಶ್ ಓಡುತ್ತಿದ್ದನು. ಭಾವೇಶ್‌ಗೆ ಓಡುವುದು ಎಂದರೆ ತುಂಬಾ ಖುಷಿ. ಅದೆಷ್ಟು ಉತ್ಸಾಹದಿಂದ ಓಡುತ್ತಿದ್ದನು ಎಂದರೆ, ಜೊತೆಯವನಿಗಷ್ಟೇ ಅದು ಶಿಕ್ಷೆಯಾಗಿತ್ತು. ಈತನಿಗೋ ಅದೂ ಕೂಡಾ ಆಟವಾಗಿತ್ತು.

ಶಾಲೆಯಲ್ಲಿ ಪ್ರತಿವರ್ಷ ಕೆಲವು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಎಂಟನೇ